1ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್ ಸಿ , ನ್ಯಾಯಾಧೀಶರವರ

ನ್ಯಾಯಾಲಯ , ಚನ್ನಗಿರಿ .

ಸಿಸಿ ನಂ. **770/2024**

ಹೆಸರುಃ ಕಮಲಮ್ಮ ಚಾಸಾಃ 1

ಗಂಡನ ಹೆಸರುಃ ಶಿವಮೂರ್ತಪ್ಪ ಪ್ರಾಸಾ: 1

ವಯಸ್ಸುಃ 65 ವರ್ಷ

ಉದ್ಯೋಗಃ ಗೃಹಿಣಿ

ವಾಸ ಸ್ಥಳಃ ಚನ್ನಗಿರಿ

ಸಾಕ್ಷಿಗೆ ದಿನಾಂಕಃ 28-01-2026 ರಂದು ಪ್ರಮಾಣ ವಚನ ಭೋಧಿಸಲಾಯಿತು .

**ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ**

ಚಾಸಾ-4 ನನ್ನ ಗಂಡ, ಚಾಸಾ-5 ರಿಂದ 8 ನಮ್ಮ ಗ್ರಾಮಸ್ಥರು 1ನೇ ಆರೋಪಿ ಚಾಸಾ-1 ರವರ ತಮ್ಮ. 2 ನೇ ಆರೋಪಿ 1ನೇ ಆರೋಪಿಯ ಹೆಂಡತಿ, 3 ನೇ ಅರೋಪಿ 1 ಮತ್ತು 2ನೇ ಅರೋಪಿತರ ಮಗ.

ದಿಃ 03-10-2023 ರಂದು ಮಧ್ಯಾಹ್ನ 2.00 ಗಂಟೆ ಸಮಯದಲ್ಲಿ ನಮಗೆ ಸೇರಿದ ಮಾರುತಿ ಸರ್ಕಲ್‌ನ ನಿವೇಶನ ನಂ 935 ರಲ್ಲಿ ಆರೋಪಿತರು ಎಲೆಕ್ಟ್ರೀಕಲ್ ಸಾಮಾನನ್ನು ಇಡುವ ಒಂದು ಪೆಟ್ಟಿಗೆ ಅಂಗಡಿಯನ್ನು ಇಟ್ಟಿದ್ದರು. 1ನೇ ಆರೋಪಿ ಸದರಿ ಅಂಗಡಿಯನ್ನು ತಿಂಗಳಿಗೆ 3 ಸಾವಿರ ರೂ, ಬಾಡಿಗೆ ಮತ್ತು ರೂ.10000/- ಮುಂಗಡವನ್ನು ಪಡೆದು ಬೇರೆಯವರಿಗೆ ಬಾಡಿಗೆಗೆ ಕೊಟ್ಟಿರುತ್ತಾರೆ. ಸದರಿ ಬಾಡಿಗೆದಾರರನ್ನು ನಾನು ಮತ್ತು ಚಾಸಾ-4 ರವರು ಪೆಟ್ಟಿಗೆ ಅಂಗಡಿಯನ್ನು ಏಕೆ ಇಟ್ಟಿದ್ದೀರಿ ಎಂದು ಕೇಳಿದಾಗ ಸದರಿ ಬಾಡಿಗೆಯಾತ 1ನೇ ಆರೋಪಿಯಿಂದ ಬಾಡಿಗೆಗೆ ಪಡೆದಿರುವುದಾಗಿ ತಿಳಿಸಿ ಅವನನ್ನೇ ಹೋಗಿ ಕೇಳಲು ಹೇಳಿರುತ್ತಾನೆ. ಹಾಗಾಗಿ ನಾನು 1ನೇ ಆರೋಪಿಯನ್ನು ವಿಚಾರಿಸುವ ಮುನ್ನವೇ 1ನೇ ಅರೋಪಿ ನಮ್ಮ ಮೇಲೆ ಜಗಳಕ್ಕೆ ಬಂದಿರುತ್ತಾನೆ. 1ನೇ ಆರೋಪಿ ಕೈಯಲ್ಲಿ ಕುಡುಗೋಲನ್ನು ಹಿಡಿದುಕೊಂಡು ಚಾಸಾ-4 ರವರಿಗೆ ಕೊಚ್ಚುತ್ತೇನೆಎಂದು ಬಂದಿರುತ್ತಾರೆ. 2 ಮತ್ತು 3 ನೇ

ಅರೋಪಿತರು ನನ್ನನ್ನು ದಬ್ಬಾಡಿ ಹೊಡೆಯಲು ಬಂದಿರುತ್ತಾರೆ. ಸದರಿ ಸಮಯಕ್ಕೆ ಬಹಳ ಜನ ಸೇರಿದ್ದು ಜಗಳವನ್ನು ಬಿಡಿಸಿರುತ್ತಾರೆ.

ಸದರಿ ದಿನ ಸುಸ್ತಾದ ಕಾರಣ ಮಾರನೇ ದಿನ ಠಾಣೆಗೆ ಹಾಜರಾಗಿ ನಾನು ದೂರನ್ನು ದಾಖಲಿಸಿರುತ್ತೇನೆ.

ಸಾಕ್ಷಿ ಕಡತದಲ್ಲಿನ ಸದರಿ ದೂರನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-1 ಎಂದು, ಅದರಲ್ಲಿನ ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು.

ನಾನು ಕೊಟ್ಟ ದೂರಿನ ಹಿನ್ನೆಲೆಯಲ್ಲಿ ಪೊಲೀಸರು ಸ್ಥಳ ಮಹಜರಿಗೆ ಬಂದಿದ್ದು ನಾನು ತೋರಿಸಿದ ಸ್ಥಳದಲ್ಲಿ ಚಾಸ-2 ಮತ್ತು 3 ರವರ ಸಮಕ್ಷಮ 2 ರಿಂದ 3 ಗಂಟೆಗಳ ಕಾಲ ಮಹಜರನ್ನು ಜರುಗಿಸಿರುತ್ತಾರೆ. ಸದರಿ ಮಹಜರಿಗೆ ಚಾಸಾ-2 ಮತ್ತು 3 ರವರ ಸಹಿಯನ್ನು ಪೊಲೀಸರು ಪಡೆದಿರುತ್ತಾರೆ.

ಸಾಕ್ಷಿ ಕಡತದಲ್ಲಿನ ಸದರಿ ಮಹಜರನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-2 ಎಂದು, ಅದರಲ್ಲಿನ ಸಾಕ್ಷಿಯ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು. ಸದರಿ ಸಮಯಕ್ಕೆ ಭಾವಚಿತ್ರಗಳನ್ನು ತೆಗೆದಿರುತ್ತಾರೆ, ಸಾಕ್ಷಿ ಕಡತದಲ್ಲಿನ ಭಾವಚಿತ್ರಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಕ್ರಮವಾಗಿ ನಿಪಿ-3 ಮತ್ತು 4 ಎಂದು ಗುರುತಿಸಲಾಯಿತು.

1ನೇಆರೋಪಿ ತಂದಿದ್ದ ಕುಡುಗೋಲನ್ನು ಜನ ಬಂದ ಕಾರಣ ಆತನೇ ಮನೆಯ ಒಳಗೆ ತೆಗೆದಕೊಂಡುಹೋಗಿರುತ್ತಾನೆ.

**(ಈ ಹಂತದಲ್ಲಿ ಸಾಕ್ಷಿಯು ದೂರು ಮತ್ತು ಮಹಜರಿಗೆ ಭಾಗಶಃ ಪ್ರತಿಕೂಲ ಸಾಕ್ಷ್ಯ ನುಡಿದಿದ್ದರಿಂದ ಮಾನ್ಯ ಸಹಾಯಕರ ಸರ್ಕಾರಿ ಅಭಿಯೋಜಕರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಲು ಕೇಳಿಕೊಂಡಿದ್ದು, ದೂರು ಮತ್ತು ಮಹಜರನ್ನು ನೋಡಲಾಗಿ ಸಾಕ್ಷಿಯು ದೂರು ಮತ್ತು ಮಹಜರಿಗೆ ಭಾಗಶಃ ಪ್ರತಿಕೂಲ ಸಾಕ್ಷಿ ನುಡಿದಿರುವುದು ಕಂಡು ಬರುತ್ತದೆ. ಆದ್ದರಿಂದ ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿ ನೀಡಲಾಯಿತು.)**

**ಪಾಟಿ ಸವಾಲುಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ**

ಮಾರುತಿ ಸರ್ಕಲ್ ನಲ್ಲಿ ಇರುವ ನಮ್ಮ ನಿವೇಶನ ಸಂಖ್ಯೆ 936/815, 63 ಇಂಟು 17 ಅಡಿ ಉದ್ದಗಲದ ನಿವೇಶನ ಎಂದರೆ ಸರಿ. ಅರೋಪಿತರು ನಮ್ಮನ್ನು ಹೆದರಿಸಿ ಬೆದರಿಸಿ ನಮ್ಮ

ಅನುಮತಿ ಇಲ್ಲದೆ ಚಾಸಾ-8 ರವರಿಗೆ ಸದರಿ ನಿವೇಶನದಲ್ಲಿ ಶೆಡ್ ಹಾಕಲು ಕೊಟ್ಟಿದ್ದರು ಎಂದರೆ ಸರಿ. ಸದರಿ ಶೆಡ್ ನ್ನು ತೆಗೆಸಿ ಎಂದು ನಾನು ಅರೋಪಿತರನ್ನು ಕೇಳಿದರೂ ಸಹ ಆರೋಪಿತರು ನನ್ನ ಮಾತನ್ನು ಕೇಳಿರುವುದಿಲ್ಲ ಎಂದರೆ ಸರಿ. ಸದರಿ ಶೆಡ್ ನುನ ತೆರವುಗೊಳಿಸುವಂತೆ ಆರೋಪಿತರನ್ನು ಕೇಳಿದಾಗ ಆರೋಪಿತರು ಅವಾಚ್ಯ ಶಬ್ದಗಳಿಂದ ಬೈಯ್ದು ಕೊಲೆ ಬೆದರಿಕೆ ಹಾಕಿದರು ಎಂದರೆ ಸರಿ. ನಂತರ ಆರೋಪಿತರು ನಾನು ತೊಟ್ಟಿದ್ದ ಬಟ್ಟೆಯನ್ನುಹಿಡಿದು ಎಳೆದಾಡಿ ನನ್ನ ಮ ಾನಕ್ಕೆ ಕುಂದುಟುಮಾಡಿದರು ಎಂದರೆ ಸರಿ. ಅರೋಪಿತರೆಲ್ಲಾ ಸೇರಿ ಕೈ ಕಾಲುಗಳಿಂದ ಹೊಡೆದು ಜೀವ ಬೆದರಿಕೆ ಹಾಕಿದರು ಎಂದರೆ ಸರಿ. ಅಲ್ಲೆ ಇದ್ದ ಚಾಸಾ-5 ಮತ್ತು 6 ರವರು ಸದರಿ ಜಗಳವನ್ನು ಬಿಡಿಸಿದರು ಎಂದರೆ ಸ ರಿ. ಸದರಿ ವಿಚಾರದ ಕುರಿತು ನಾನು 04-10-2023 ರಂದು 4.00 ಗಂಟೆಗೆ ನಿಪಿ-1 ರಂತೆ ದೂರನ್ನು ದಾಖಲಿಸಿರುತ್ತೇನೆ ಎಂದರೆ ಸರಿ.

ಅದೇ ದಿನ ಪೊಲೀಸರು ನಾನು ತೋರಿಸಿದ ಸ್ಥಳದಲ್ಲಿ ಸಂಜೆ 5.00 ರಿಂದ 6.00 ವರೆಗೆ ನಿಪಿ-2 ರಂತೆ ಚಾಸಾ-2 ಮತ್ತು 3 ರವರ ಸಮಕ್ಷಮ ಪಂಚನಾಮೆ ಜರುಗಿಸಿ ಅದಕ್ಕೆ ನಮ್ಮ ಸಹಿ ಪಡೆದಿರುತ್ತಾರೆ ಎಂದರೆ ಸರಿ.

**ಪಾಟಿ ಸವಾಲುಃ ಆರೋಪಿತರ ಪರ ಶ್ರೀ ಜಿ ಎಸ್ ಎಂ ವಕೀಲರಿಂದಃ**

ಚಾಸಾ-4 ಮತ್ತು 1 ನೇ ಆರೋಪಿ ಒಟ್ಟುಕುಟುಂಬದ ಆಸ್ತಿ ಎಂದರೆ ಸರಿ. ವಿವಾದಿತ ಆಸ್ತಿ ಒಟ್ಟು ಕುಟುಂಬದ ಆಸ್ತಿ ಎಂದರೆ ಸಾಕ್ಷಿ ನನ್ನ ಸ್ವಯಾರ್ಜಿತ ಆಸ್ತಿ ಎಂದು ನುಡಿಯುತ್ತಾರೆ. ಅವರ ಒಟ್ಟು ಕುಟುಂಬದ ಆಸ್ತಿಗಳನ್ನು ವಿಭಾಗ ಮಾಡಿಕೊಂಡಿಲ್ಲ ಎಂದರೆ ಸರಿಯಲ್ಲ. ಸದರಿ ವಿವಾದಿತ ನಿವೇಶನ ಮುಖ್ಯ ಹೆದ್ದಾರಿಯ ಪಕ್ಕದಲ್ಲಿದೆ ಎಂದರೆ ಸರಿ ಮತ್ತು ಸದರಿ ಆಸ್ತಿಯಲ್ಲಿ ಸ್ವಲ್ಪ ಭಾಗ ರಸ್ತೆಗೂ ಸಹ ಭೂ ಸ್ವಾಧೀನವಾಗಿದೆ ಎಂದರೆ ಸರಿ. ಸದರಿ ಭೂಸ್ವಾಧೀನದ ಪರಿಹಾರವನ್ನು ಪಡೆದುಕೊಂಡಿದ್ದೆನೆ ಎಂದರೆ ಸರಿಯಲ್ಲ.

(ಸದರಿ ಸಮಯಕ್ಕೆ ಮಾನ್ಯ ಸ ಸ ಅ ರವರು ಸಾಕ್ಷಿಗೆ 2-3 ಬಾರಿ ವಕೀಲರು ಕೇಳಿದ ಪ್ರಶ್ನೆಗೆ ಮಾತ್ರ ಉತ್ತರರಿಸಲು ಹೇಳಿದರೂ ಸಹ ಸಾಕ್ಷಿ ಸದರಿಯವರ ಸೂಚನೆಯನ್ನುಪಾಲಿಸದೇ ಹೆಚ್ಚಿದ ವಿವರಣೆಯನ್ನು ಕೊಟ್ಟ ಕಾರಣ ಹಾಗಾಗಿ ಸಾಕ್ಷಿಯ ಮುಂದುವರೆದ ಪಾಟೀ ಸವಾಲನ್ನು ಮುಂದಿನ ದಿನಾಂಕಕ್ಕೆ ಮುಂದೂಡಲಾಯಿತು.)

**( ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಪರಿಸಲಾಯಿತು.)**

**ಓ.ಹೇ.ಕೇ. ಸರಿ ಇದೆ.**

**01ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು**
**ಮತ್ತು ಜೆಎಂಎಫ್ ಸಿ, ಚನ್ನಗಿರಿ.**